## ಈ ಲೇಖನದ ವಿಷಯಾನುಕ್ರಮಣಿಕೆ


ದೇವರ ಅಸ್ತಿತ್ವ 4/8 2

ಜೀವನ ಅಸ್ತಿತ್ವದ ಸಮರ್ಥನೆ 2

ಭೂತಚತುಷ್ಟಯಗಳ ಸಂಯೋಗ ಜೀವವಲ್ಲ. 6

ದೇಹವೇ ಜೀವವಲ್ಲ ಎನ್ನುವದಕ್ಕೆ ಪ್ರಮಾಣ. 14




# ವಿಶ್ವನಂದಿನಿ ಲೇಖನಮಾಲೆ — 174

## ದೇವರ ಅಸ್ತಿತ್ವ 4/8

## ಜೀವನ ಅಸ್ತಿತ್ವದ ಸಮರ್ಥನೆ

ನಾಸ್ತಿಕರ ಸಿದ್ಧಾಂತದ ಮೂಲಭೂತ ಸಮಸ್ಯೆಗಳನ್ನು ಎತ್ತಿ ತೋರಿಸಿಯಾಯಿತು. ಆದರೆ ಅವನು ಹುಟ್ಟುಹಾಕಿರುವ ಪ್ರಶ್ನೆಗಳಿಗೆ ವೈಜ್ಞಾನಿಕ ಉತ್ತರಗಳನ್ನು ಶ್ರದ್ಧಾಳುಗಳಿಗೆ ತಿಳಿಸಿಹೇಳುವುದು ಮುಂದಿನ ಜವಾಬ್ದಾರಿ. ಶ್ರೀಮದಾಚಾರ್ಯರ ತತ್ವವಾದ ಆ ಎಲ್ಲ ಪ್ರಶ್ನೆಗಳಿಗೂ ಸಮರ್ಥ ಉತ್ತರವನ್ನು ಕೊಟ್ಟು ಈ ಕಾರ್ಯವನ್ನು ನಿರ್ವಹಿಸಿದೆ. ನಾಸ್ತಿಕರ ಒಂದೊಂದು ವಾದವನ್ನು ವಿಮರ್ಶಿಸುತ್ತ ತತ್ವಗಳನ್ನು ಮನದಟ್ಟು ಮಾಡಿಕೊಂಡು ದೇವರ ಅಸ್ತಿತ್ವದ ಪ್ರಶ್ನೆಯನ್ನು ಕೈಗೆತ್ತಿಕೊಳ್ಳೋಣ.

ನಾಸ್ತಿಕರು ದೇಹವೇ ಜೀವ. ಹೊರತು ಜೀವ ಎನ್ನುವ ಪ್ರತ್ಯೇಕ ಪದಾರ್ಥವಲ್ಲ ಎನ್ನುತ್ತಾರೆ. ಭೂಮಿ ನೀರು ಗಾಳಿ ಬೆಂಕಿ ಈ ನಾಕು ಪದಾರ್ಥಗಳು ವಿಶಿಷ್ಟ ಕ್ರಮದಲ್ಲಿ ಸಂಯೋಗವನ್ನು ಹೊಂದಿ ದೇಹದ ಆಕಾರವನ್ನು ಪಡೆದಾಗ ಅಲ್ಲಿ “ಚೈತನ್ಯ” ಉದ್ಭವಿಸುತ್ತದೆಯೆ ಹೊರತು ಅದಕ್ಕಾಗಿ ಪ್ರತ್ಯೇಕವಾದ ಚೇತನವನ್ನು ಒಪ್ಪುವ ಆವಶ್ಯಕತೆಯಿಲ್ಲ ಎಂದು ಅವರು ಪ್ರತಿಪಾದಿಸುತ್ತಾರೆ.

ಭೂಮಿ ಬೆಂಕಿಗಳಲ್ಲಿ ಇಲ್ಲದ ಜೀವ ದೇಹದಲ್ಲಿ ಹೇಗೆ ಬರಲು ಸಾಧ್ಯ ಎಂಬ ಪ್ರಶ್ನೆಗೆ ಒಂದು ಮೋಹಕವಾದ ಉತ್ತರವನ್ನು ನೀಡುತ್ತಾರೆ. ಎಲೆಯ ಬಣ್ಣ ಹಸಿರು. ಅಡಿಕೆಯ ಬಣ್ಣ ಕಂದು. ಸುಣ್ಣದ ಬಣ್ಣ ಬಿಳಿ. ಈ ಮೂರರಲ್ಲೂ ಕೆಂಪಿಲ್ಲ. ಆದರೂ ಇವುಗಳ ಮಿಶ್ರಣದಿಂದ ಉಂಟಾದ ತಾಂಬೂಲದಲ್ಲಿ ರಕ್ತದಲ್ಲಿರುವಂಥ ಕೆಂಪು ಬಣ್ಣ ಉಂಟಾಗುವಂತೆ ಈ ನಾಕರ ವಿಶಿಷ್ಟ ಮಿಶ್ರಣದಿಂದ ದೇಹದಲ್ಲಿ ಚೈತನ್ಯ ಉಂಟಾಗುತ್ತದೆ. ಹಾಗೆಯೇ ಯಾವ ಪದಾರ್ಥಗಳಿಂದ ಹೆಂಡ ತಯಾರಾಗುತ್ತದೆಯೋ ಆ ಪದಾರ್ಥಗಳಲ್ಲಿ

ಹೆಂಡದ ರುಚಿ ಇರುವದಿಲ್ಲ. ಆದರೂ ಹೆಂಡದಲ್ಲಿ ಆ ಮಾದಕತೆಯ ರುಚಿ ಉಂಟಾಗುತ್ತದೆ. ಹೀಗೆ ಮೂಲಭೂತಪದಾರ್ಥಗಳಲ್ಲಿ ಇಲ್ಲದ ಗುಣ ಅದರ ಕಾರ್ಯದಲ್ಲಿ ಉಂಟಾಗಲು ಸಾಧ್ಯವಿದೆ. ಅದಕ್ಕಾಗಿ ಭೂತಚತುಷ್ಟಯಗಳ ಸಂಯೋಗದಿಂದ ಉಂಟಾದ ದೇಹವೇ ಆತ್ಮ, ಹೊರತು ಆತ್ಮ ಎನ್ನುವದು ಪ್ರತ್ಯೇಕ ಪದಾರ್ಥವಲ್ಲ.

ಚಾರ್ವಾಕರ ಈ ವಾದವನ್ನು ತತ್ವವಾದಿಗಳು ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಅವರ ಚಿಂತನೆ ಅವೈಜ್ಞಾನಿಕವಾದದ್ದು ಎಂದು ಸಾಬೀತು ಪಡಿಸಿ ದೇಹದಿಂದ ಬೇರೆಯಾದ ಜೀವವನ್ನು ಒಪ್ಪುವ ಅನಿವಾರ್ಯತೆಯನ್ನು ಅವರು ಪ್ರತಿಪಾದಿಸುತ್ತಾರೆ.

ಅನುವ್ಯಾಖ್ಯಾನ ನ್ಯಾಯಸುಧಾ ಯುಕ್ತಿಮಲ್ಲಿಕಾಗಳಲ್ಲಿ ಈ ವಿಷಯ ಚರ್ಚಿತವಾಗಿದೆ. ತತ್ವವಾದಿಗಳಿಗೆ ಜೀವದ ಅಸ್ತಿತ್ವವನ್ನು ಸಮರ್ಥಿಸುವದು ಸವಾಲಾಗಿ ತೋರಿಲ್ಲ. ತುಂಬ ಸುಲಭವಾಗಿ ಅವರು ಈ ಸಮಸ್ಯೆಯನ್ನು ಬಗೆಹರಿಸಿದ್ದಾರೆ. ನಾಸ್ತಿಕರ ಈ ವಾದದಲ್ಲಿ

ಪರಿಹರಿಸಿಕೊಳ್ಳಲು ಸಾಧ್ಯವಿಲ್ಲದ ಮೂರು ಘೋರ ಸಮಸ್ಯೆಗಳನ್ನು ಎತ್ತಿ ತೋರಿಸಿದ್ದಾರೆ.

ಮೊದಲನೆಯದು ಭೂತಚತುಷ್ಟಯಗಳ ಸಂಯೋಗದಿಂದ ಜೀವ ಎನ್ನುವ ಪದಾರ್ಥ ನಿರ್ಮಾಣವಾಗಲು ಸಾಧ್ಯವಿಲ್ಲ. ಅವರು ನೀಡಿರುವ ದೃಷ್ಟಾಂತ ತೀರ ಅಸಂಗತವಾದದ್ದು.

ಎರಡನೆಯದು, ನಾಸ್ತಿಕರು ಹೇಳುವ ಹಾಗೆ ಭೂತಚತುಷ್ಟಯಗಳ ಸಂಯೋಗವೇ ಜೀವವಾಗಿದ್ದರೆ ಯಾರಿಗೂ ಸಾವೇ ಉಂಟಾಗಬಾರದು. ಎಲ್ಲರೂ ಚಿರಂಜೀವಿಗಳಾಗಬೇಕಿತ್ತು.

ಮೂರನೆಯದು, ಜಗತ್ತಿನ ಪ್ರತಿಯೊಬ್ಬ ವ್ಯಕ್ತಿ “ನನ್ನ ದೇಹ” ಎನ್ನುತ್ತಾನೆಯೆ ಹೊರತು “ನಾನು ದೇಹ” ಎನ್ನುವದಿಲ್ಲ. ನನ್ನ ದೇಹ, ನನ್ನ ಕೈ, ನನ್ನ ಕಾಲುಗಳು ಎಂಬ ಸಾರ್ವಜನೀನ ಅನುಭವವೇ ದೇಹವೇ ಆತ್ಮ ಎಂಬ ವಾದವನ್ನು ಹೊಸಕಿಹಾಕುತ್ತದೆ.

## ಭೂತಚತುಷ್ಟಯಗಳ ಸಂಯೋಗ ಜೀವವಲ್ಲ.

ಅವರು ಹೇಳುವ ಹಾಗೆ ಭೂಮಿ ನೀರು ಬೆಂಕಿ ಗಾಳಿಗಳ ಮಿಶ್ರಣವೇ ಜೀವವಾಗಲು ಸಾಧ್ಯವಿಲ್ಲ. ಕಾರಣ ಅವು ಜಡಪದಾರ್ಥಗಳು. ಜಡ ಮತ್ತು ಜೀವಗಳು ಸತ್ಯ ಸುಳ್ಳುಗಳ ಹಾಗೆ ವಿರುದ್ಧವಾದ ಪದಾರ್ಥಗಳು. ಹೀಗಾಗಿ ಜಡ ಜೀವವಾಗಲು ಸಾಧ್ಯವಿಲ್ಲ. ಜೀವ ಜಡವಾಗಲು ಸಾಧ್ಯವಿಲ್ಲ. ಅವರು ನೀಡಿರುವ ದೃಷ್ಟಾಂತ ತೀರ ಅವೈಜ್ಞಾನಿಕವಾದದ್ದು ಮತ್ತು ಅಸಂಗತವಾದದ್ದು.

ತಾಂಬೂಲದ ಬಣ್ಣವಾಗಲೀ, ಮದ್ಯದ ರುಚಿಯಾಗಲೀ, ದಿಢೀರನೇ ಉದ್ಭವಿಸಿದ ಪದಾರ್ಥಗಳಲ್ಲ. ಎಲೆ, ಸುಣ್ಣ ಮುಂತಾದ ಕಾರಣಪದಾರ್ಥಗಳಲ್ಲಿ ಉಂಟಾದ ರಾಸಾಯನಿಕ ಪ್ರಕ್ರಿಯೆಯಿಂದ ತಾಂಬೂಲ, ಮದ್ಯಗಳು ಆ ಬಣ್ಣ ರುಚಿಗಳನ್ನು ಪಡೆದುಕೊಳ್ಳುತ್ತವೆ. ಅಂದರೆ ಕಾರಣಗಳಲ್ಲಿ ಸೂಕ್ಷ್ಮವಾಗಿ ಇದ್ದ ಬಣ್ಣ ರುಚಿಗಳೇ ರಾಸಾಯನಿಕ ಪ್ರಕ್ರಿಯೆಯ ಪರಿಣಾಮದಿಂದ ಕಾರ್ಯಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಆದರೆ, ಭೂಮಿ, ನೀರು, ಗಾಳಿ, ಬೆಂಕಿ ಈ ಪದಾರ್ಥಗಳು ಪೂರ್ಣಾಂಗವಾಗಿ ಜಡಪದಾರ್ಥಗಳು. ಅವುಗಳಲ್ಲಿ ಚೈತನ್ಯದ ಸುಳಿವೇ ಇಲ್ಲ. ಅಂದಮೇಲೆ ಕಾರಣಗಳಲ್ಲಿಲ್ಲದ ಆ ಚೈತನ್ಯ, ದೇಹದಲ್ಲಿ ಮಾತ್ರ ಹೇಗೆ ಬರಲು ಸಾಧ್ಯ ? ಹುಣಿಸೆಹಣ್ಣು, ಮೆಣಸಿನ ಪುಡಿ, ತೊಗರಿಬೇಳೆ ಈ ಮೂರರಲ್ಲಿ ಇಲ್ಲದ ಸಿಹಿ ಎನ್ನುವ ಗುಣ ಅವುಗಳ ಮಿಶ್ರಣದಿಂದ ಉಂಟಾದ ಸಾಂಬಾರಿನಲ್ಲಿ ಬರಲು ಸಾಧ್ಯವೇ ?

ಟೀಕಾಕೃತ್ಪಾದರು ನ್ಯಾಯಸುಧೆಯಲ್ಲಿ ಹೇಳಿದ ಈ ಮಾತನ್ನೇ ವಿಸ್ತರಿಸಿ ಶ್ರೀ ವಾದಿರಾಜರು ಮತ್ತೊಂದು ಮಹತ್ತ್ವದ ಸಮಸ್ಯೆಯನ್ನು ಈ ಪ್ರಸಂಗದಲ್ಲಿ ನಾಸ್ತಿಕರಿಗೆ ಒಡ್ಡಿದ್ದಾರೆ.

**ಜಪಾಕುಸುಮಯೋರ್ಗೇಪಿ**
**ರೂಪವತ್ಯೇವ ರಕ್ತಿಮಾ ।**
**ನೀರೂಪವಾಯೌ ಕಿಂ**
**ರಕ್ತಶತಯೋರ್ಗೇಪಿ ರಕ್ತಿಮಾ ।**

ಬಣ್ಣ ಎನ್ನುವದು ಪಾರ್ಥಿವ ಪದಾರ್ಥಗಳ ಲಕ್ಷಣ. ಬಣ್ಣವಿಲ್ಲದ ಪಾರ್ಥಿವ ಪದಾರ್ಥವಿಲ್ಲ. ಈ ಪದಾರ್ಥಗಳ ಮೇಲಷ್ಟೇ ಬಣ್ಣದ ಪ್ರಭಾವವಾಗಲು ಸಾಧ್ಯ. ಅಂದರೆ ಕೆಂಪಗಿನ ಬಟ್ಟೆಯ ಮಧ್ಯದಲ್ಲಿ ತೂರಿ ಬಂದ ಬೆಳಕು ಮತ್ತೊಂದು 'ಪದಾರ್ಥ'ದ ಮೇಲೆ ಬಿದ್ದಾಗ ಆ ಪದಾರ್ಥವೂ ಕೆಂಪಾಗಿ ತೋರುತ್ತದೆ. ಆದರೆ ಸಾವಿರ ಕೆಂಪು ಬಣ್ಣಗಳ ಮಧ್ಯದಲ್ಲಿದ್ದರೂ ಗಾಳಿ ಕೆಂಪಾಗಿ ಕಾಣಿಸುತ್ತದೆಯೇ ? ಇಲ್ಲ. ಕಾರಣ, ಗಾಳಿಗೆ ಬಣ್ಣವೇ ಇಲ್ಲ. ಅಂದಮೇಲೆ ಬಣ್ಣವಿರುವ ಪದಾರ್ಥದ ಮೇಲೆ ಮತ್ತೊಂದು ಬಣ್ಣದ ಪರಿಣಾಮವಾಗಲು ಸಾಧ್ಯ ಎಂಬ ನಿಯಮವನ್ನು ಒಪ್ಪಿದಂತಾಯಿತು.

ಇದನ್ನೇ ಎಲ್ಲ ಕಡೆಗೆ ಅನ್ವಯಿಸಿದಾಗ ರಸವಿರುವ ಪದಾರ್ಥದಲ್ಲಿ ಮಾತ್ರ ರಸದ ಪರಿಣಾಮ, ಗಂಧವಿರುವ ಪದಾರ್ಥದಲ್ಲಿ ಗಂಧದ ಪರಿಣಾಮ, ಶಬ್ದದ ಮೇಲೆ ಮಾತ್ರ ಶಬ್ದದ ಪರಿಣಾಮ ಎಂದು ಸ್ಪಷ್ಟವಾಗಿ ನಮಗೆ ತೋರುತ್ತದೆ.

ಈ ನಿಯಮದ ಮತ್ತೊಂದು ಮುಖ ರೂಪಕ್ಕೆ ರೂಪದ ಜತೆಯಲ್ಲಿ ಮಾತ್ರ ಸಂಘರ್ಷ ಉಂಟಾಗುತ್ತದೆ, ರಸದ ಜತೆಯಲ್ಲಿ ಘರ್ಷಣೆ ಉಂಟಾಗುವದಿಲ್ಲ. ಶಬ್ದ ಮತ್ತೊಂದು ಶಬ್ದದ ಜತೆಯಲ್ಲಿ ಸಂಘರ್ಷವನ್ನು ಹೊಂದುತ್ತದೆ, ರೂಪ ರಸ ಗಂಧಗಳ ಜತೆಯಲ್ಲಿ ಅಲ್ಲ, ಎಂಬ ನಿಯಮವನ್ನು ಪರಿಚಯಿಸುತ್ತದೆ. ಆದ್ದರಿಂದ ಬಣ್ಣವೇ ಇಲ್ಲದ ಗಾಳಿಯ ಮೇಲೆ ಯಾವ ಬಣ್ಣದ ಪರಿಣಾಮವೂ ಉಂಟಾಗುವದಿಲ್ಲ, ಮತ್ತು ಬಣ್ಣವಿರದ ಗಾಳಿಯಿಂದ ಬಣ್ಣವೊಂದನ್ನು ಸೃಷ್ಟಿಸಲೂ ಸಾಧ್ಯವಿಲ್ಲ.

### ಈ ನೆಲೆಗಟ್ಟಿನ ಮೇಲೆ ಶ್ರೀ ವಾದಿರಾಜರು ನಾಸ್ತಿಕರನ್ನು ಹೀಗೆ ಪ್ರಶ್ನಿಸಿದ್ದಾರೆ.

ಎಲೆಗೂ ಬಣ್ಣವಿದೆ, ಅಡಿಕೆಗೂ ಬಣ್ಣವಿದೆ, ಸುಣ್ಣಕ್ಕೂ ಬಣ್ಣವಿದೆ. ಈ ಮೂರು ಬಣ್ಣಗಳ ಮಿಶ್ರಣದಿಂದ ಮತ್ತೊಂದು ಹೊಸಬಣ್ಣ ಸಿದ್ಧವಾಯಿತು. ಹೊರತು ಹೊಸದಾದ ನಾದ ಸೃಷ್ಟಿಯಾಗಲಿಲ್ಲ. ಕಾರಣ, ಎಲೆ, ಅಡಿಕೆ, ಸುಣ್ಣ ಇವು ಯಾವುದರಲ್ಲಿಯೂ ನಾದವಿಲ್ಲ. ಅಂದಮೇಲೆ ಮಣ್ಣಿನಲ್ಲಿ ಜೀವವಿಲ್ಲ,

ನೀರಿನಲ್ಲಿ ಜೀವವಿಲ್ಲ, ಬೆಂಕಿಯಲ್ಲಿ ಜೀವವಿಲ್ಲ, ಗಾಳಿಯಲ್ಲಿ ಜೀವವಿಲ್ಲ. ಜೀವವಿಲ್ಲದ ಈ ನಾಲ್ಕರ ಸಂಯೋಗದಿಂದ ಉಂಟಾದ ದೇಹದಲ್ಲಿ ಜೀವ ಹೇಗೆ ಬರಲು ಸಾಧ್ಯ ? ಕಾರಣದಲ್ಲಿ ಇಲ್ಲದಿದ್ದರೂ ಕಾರ್ಯದಲ್ಲಿ ಬರುವುದಾದರೆ ಎಲೆ ಅಡಿಕೆ ಸುಣ್ಣಗಳ ಮಿಶ್ರಣವಾದ ತಾಂಬೂಲದಲ್ಲಿ ಮೃದಂಗ, ತಬಲಾ, ಕೊಳಲುಗಳ ನಾದ ಕೇಳಿಸಲಿ. ರುಚಿಯೇ ಇಲ್ಲದ ಬಂಗಾರ, ಬೆಳ್ಳಿ, ತಾಮ್ರ, ಕಂಚುಗಳಿಂದ ತಯಾರಿಸಿದ ಮಿಠಾಯಿಯ ಆಕಾರದಲ್ಲಿ ಮಿಠಾಯಿಯ ರುಚಿ ನಿರ್ಮಾಣವಾಗಲಿ.ಅವು ನಿರ್ಮಾಣವಾಗಬಹುದಾದರೆ ಭೂಮಿ ಬೆಂಕಿಗಳಿಂದ ಜೀವ ನಿರ್ಮಾಣವಾಗಬಹುದು.
ದೇಹವೇ ಆತ್ಮನಾದರೆ ಯಾರಿಗೂ ಸಾವುಂಟಾಗಬಾರದು.

ಒಂದು ಪಕ್ಷ ದೇಹವೇ ಜೀವ ಎಂದು ಒಪ್ಪಿದರೂ ಈ ಸಮಸ್ಯೆ ಹಿಮಾಲಯದಂತೆ ಮುಂದೆ ನಿಲ್ಲುತ್ತದೆ. ನಾಲ್ಕು ಕಾಲುಗಳು ಒಂದು ಹಲಗೆಯನ್ನು ಜೋಡಿಸಿ ಟೀಪಾಯಿಯನ್ನು ಸಿದ್ಧಪಡಿಸಿದ ಮೇಲೆ ಆ ಟೀಪಾಯಿ ತಾನಾಗಿಯೇ ನಾಶವಾಗುವದಿಲ್ಲ. ಎಲ್ಲಿಯವರೆಗೆ ಆ ನಾಲ್ಕು ಕಾಲು ಹಲಗೆಗಳ

ಸಂಯೋಗಕ್ಕೆ ಧಕ್ಕೆ ಉಂಟಾಗುವದಿಲ್ಲವೋ ಅಲ್ಲಿಯವರೆಗೆ ಟೀಪಾಯಿ ಇರುತ್ತದೆ. ಹಾಗೆಯೇ ಭೂಮಿ, ನೀರು, ಬೆಂಕಿ, ಗಾಳಿ ಎಂಬ ನಾಕು ಭೂತಗಳ ಸಂಯೋಗದಿಂದ ಉಂಟಾದ ದೇಹವೇ ಜೀವ ಎನ್ನುವದಾದರೆ ಸಾವು ಏತಕ್ಕಾಗಿ ಉಂಟಾಗುತ್ತದೆ ?

ಬದುಕಿರುವ ವ್ಯಕ್ತಿಯ ದೇಹಕ್ಕೆ ಸತ್ತ ಹೆಣಕ್ಕೂ ಯಾವ ವ್ಯತ್ಯಾಸವೂ ಇಲ್ಲ. ವ್ಯಕ್ತಿ ಬದುಕಿದ್ದಾಗ ಅವನ ದೇಹದಲ್ಲಿ ಇದ್ದ ಭೂತಚತುಷ್ಟಯಗಳ ಮಿಶ್ರಣ ಸತ್ತ ಮೇಲೂ ಅವನ ದೇಹದಲ್ಲಿದೆ. ಜೀವವಿದ್ದಾಗ ಇದ್ದ ಅಂಗ ಅವಯವಗಳೇ ಹೆಣದಲ್ಲಿಯೂ ಇವೆ. ಅಷ್ಟೆ ಅಲ್ಲ ಅವು ಕಾರ್ಯವನ್ನು ನಿರ್ವಹಿಸಲು ಸಮರ್ಥವಾಗಿಯೂ ಇವೆ.[1]

---

[1] ಹೆಣದಲ್ಲಿ ಇರುವ ಅವಯವಗಳ ಶಕ್ತಿ ಒಮ್ಮೆಲೆ ಕುಂದುವದಿಲ್ಲ ಎಂಬ ತತ್ವವಾದಿಗಳ ಈ ಮಾತನ್ನು ಇಂದಿನ ವೈದ್ಯಕೀಯ ಪೂರ್ಣವಾಗಿ ಬೆಂಬಲಿಸುತ್ತದೆ. ಸತ್ತವನ ಕಣ್ಣು, ಮೂತ್ರಪಿಂಡ ಮುಂತಾದವುಗಳನ್ನು ತೆಗೆದು ಮತ್ತೊಬ್ಬರಿಗೆ ಜೋಡಿಸಿದಾಗ ಅವು ಕ್ರಿಯಾಶೀಲವಾಗುತ್ತವೆ. ಅಂದಮೇಲೆ ಆ ಅವಯವಗಳು ಸತ್ತಿಲ್ಲ. ಆ ಅವಯವಗಳ ಮುಖಾಂತರ ಕಾರ್ಯ ನಿರ್ವಹಿಸುವ ವ್ಯಕ್ತಿ ಇಲ್ಲವಾದ್ದರಿಂದ ಅವು ನಿಷ್ಕ್ರಿಯವಾಗಿವೆ. ನೋಡುವ ವ್ಯಕ್ತಿ ಇಲ್ಲವಾದ್ದರಿಂದ ನೋಟ ಸಾಧ್ಯವಾಗಿಲ್ಲವಷ್ಟೆ ಹೊರತು, ಕಣ್ಣಿನ ನೋಡುವ ಶಕ್ತಿ ನಾಶವಾಗಿಲ್ಲ ಎಂದು ಒಪ್ಪಿದಂತಾಯಿತು.

ಹೀಗೆ ಬದುಕಿರುವ ದೇಹಕ್ಕೂ ಸತ್ತ ದೇಹಕ್ಕೂ ಯಾವ ವ್ಯತ್ಯಾಸವೂ ಇಲ್ಲದಿರುವಾಗ, ದೇಹವೇ ಜೀವ ಎಂದಾದಾಗ ದೇಹದ ಸಾವಿಗೆ ಕಾರಣವೇನು ?

ನಾಕು ಕಾಲು ಒಂದು ಹಲಗೆಯ ಟೀಪಾಯಿ ಒಂದು ದಿನ ಇದ್ದಕ್ಕಿದ್ದ ಹಾಗೆ ಕುಸಿದು ಬೀಳುತ್ತದೇನು ? ಹೆಣದಲ್ಲಿ ಮೂಗಿನಿಂದ ಗಾಳಿಯನ್ನು ತಳ್ಳಿದರೆ ಒಳಕ್ಕೂ ಹೋಗುತ್ತದೆ, ಎಳೆದರೆ ಹೊರಗೂ ಬರುತ್ತದೆ. ಇವತ್ತಿನ ವೈದ್ಯಕೀಯಉಪಕರಣಗಳನ್ನು ಉಪಯೋಗಿಸಿ ಉಸಿರಾಟವನ್ನು ನಡೆಸಲು ಸಾಧ್ಯವಿದ್ದರೂ ಉಸಿರಾಡುವವನು ಇಲ್ಲವಾದ್ದರಿಂದ ಹೆಣವನ್ನು ಬದುಕಿಸಲು ಸಾಧ್ಯವಿಲ್ಲ.

ಹೀಗಾಗಿ, ದೇಹದ ಉಸಿರಾಟ ಜೀವನಲ್ಲ. ಕೈ ಕಾಲುಗಳು ಜೀವನಲ್ಲ. ಅದೆಲ್ಲದರ ಸಮುದಾಯವಾದ ದೇಹವೂ ಜೀವನಲ್ಲ. ಯಾರಿದ್ದಾಗ ಇವೆಲ್ಲವೂ ಸಕ್ರಿಯವಾಗುತ್ತವೆಯೋ, ಯಾರಿಲ್ಲದಾಗ ನಿಷ್ಕ್ರಿಯವಾಗುತ್ತವೆಯೇ ಅವನೇ

ಜೀವ. ದೇಹ ರಥ ಜೀವ ರಥಿಕ. ರಥ ರಥಿಕರು ಎಂದೂ ಒಂದೇ ಪದಾರ್ಥಗಳಲ್ಲ.

(ಇಷ್ಟೆ ಅಲ್ಲ. ರಥ, ರಥಿಕ ಇವರಿಬ್ಬರಿದ್ದ ಮಾತ್ರಕ್ಕೆ ರಥ ಮುಂದೋಡುವದಿಲ್ಲ. ಆದ್ದರಿಂದ ಇವರಿಬ್ಬರನ್ನು ಮುನ್ನಡೆಸುವ ಒಬ್ಬ ಸಾರಥಿ, ಪಾರ್ಥಸಾರಥಿಯನ್ನೂ ಒಪ್ಪುವ ಅನಿವಾರ್ಯತೆ ಇದೆ. ಅದರ ಚರ್ಚೆ ಮುಂದಿನ ಅಧ್ಯಾಯಗಳಲ್ಲಿ. )

ಮತ್ತೂ ದೇಹವನ್ನೇ ಜೀವ ಎನ್ನುವದಾದರೆ ದೇಹದಲ್ಲಿ ಯಾವ ತರಹದ ಪದಾರ್ಥಗಳ ಮಿಶ್ರಣವಿದೆಯೋ ಆ ಎಲ್ಲ ಪದಾರ್ಥಗಳನ್ನು ಹಾಗೆಯೇ ಮಿಶ್ರಣ ಮಾಡಿದರೆ ಜೀವವಿರುವ ದೇಹ ನಿರ್ಮಾಣವಾಗಿಬಿಡಬೇಕು. ಆದರೆ ಇಂದಿನ ವೈದ್ಯಕೀಯವೇ ಈ ವಿಷಯದಲ್ಲಿ ಕೈಚಲ್ಲಿ ಕುಳಿತಿದೆ. ಜೀವಕೋಶವಿರುವ ರಕ್ತವನ್ನೇ ತಯಾರಿಸಲು ಸಾಧ್ಯವಿಲ್ಲದಿದ್ದಾಗ ಜೀವನನ್ನು ಸೃಷ್ಟಿಸಲು ಸಾಧ್ಯವಾದೀತೇ ? ಆದ್ದರಿಂದ ಈ ಬಗ್ಗೆ ಹೆಚ್ಚಿನದನ್ನು ಹೇಳುವ ಆವಶ್ಯಕತೆಯಿಲ್ಲ. ಹೀಗಾಗಿ ದೇಹವೇ ಜೀವನಾದರೆ ಸಾವುಂಟಾಗಬಾರದು. ಎಲ್ಲರಿಗೂ

ಸಾವುಂಟಾಗುತ್ತದೆ, ಆದ್ದರಿಂದ ದೇಹವೇ ಜೀವನಲ್ಲ ಎಂಬ ಮಾತನ್ನು ಒಪ್ಪಲೇಬೇಕು.

## ದೇಹವೇ ಜೀವವಲ್ಲ ಎನ್ನುವದಕ್ಕೆ ಪ್ರಮಾಣ.

"ನಾನು ದೇಹ", "ನನ್ನ ದೇಹ" ಇವೆರಡರಲ್ಲಿ ಯಾವುದು ಸರಿ ? ಉತ್ತರ ಎಲ್ಲರಿಗೂ ಸಿದ್ಧ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿ ನನ್ನ ದೇಹ ಎನ್ನುತ್ತಾನೆಯೇ ಹೊರತು ನಾನು ದೇಹ ಎನ್ನುವದಿಲ್ಲ. ಈ ಸಾರ್ವಜನೀನ ಅನುಭವವನ್ನು ತಪ್ಪು ಎಂದು ಹೇಳಲು ಯಾವ ದಾರ್ಶನಿಕನಿಗೂ ಸಾಧ್ಯವಿಲ್ಲ. ಅನುಭವಕ್ಕೆ ವಿರುದ್ಧವಾದದ್ದು ದರ್ಶನವೇ ಅಲ್ಲ.

ನಮಗೆ ಸಂಬಂಧಪಟ್ಟ ಮತ್ತೊಂದು ವಸ್ತುವನ್ನಷ್ಟೇ ನಾವು "ನನ್ನದು" ಎಂದು ವ್ಯವಹರಿಸುತ್ತೇವೆ. ನಮ್ಮನ್ನು ನಾವೇ "ನನ್ನವನು" ಎಂದು ಕರೆದುಕೊಳ್ಳಲು ಸಾಧ್ಯವಿಲ್ಲ.ಆದ್ದರಿಂದ ಈ ದೇಹವನ್ನು ನಾವು "ನನ್ನದು" ಎಂದು ಕರೆಯುವದರಿಂದಲೇ ಅದು ನಮಗೆ ಸಂಬಂಧಪಟ್ಟ

ವಸ್ತು, ಹೊರತು ನಾವೇ ಅದಲ್ಲ ಎಂದು ಸಿದ್ಧವಾಗಿಬಿಡುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದ ಮತ್ತೊಂದು ಮಹತ್ತ್ವದ ಪ್ರಶ್ನೆಯನ್ನು ತೆಗೆದುಕೊಂಡು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಪರಿಹರಿಸಿದ್ದಾರೆ. ಯಾವುದೇ ವಿಷಯವನ್ನಾಗಲೀ ಆಚಾರ್ಯರು ಮತ್ತು ಅವರ ಪರಂಪರೆಯ ಜ್ಞಾನಿಗಳು ತಲಸ್ಪರ್ಶಿ ವಿಚಾರ ಮಾಡದೇ ನಿರ್ಣಯಿಸುವಿದಿಲ್ಲ ಎನ್ನುವದಕ್ಕೆ ಮುಂದಿನ ಸ್ವಾರಸ್ಯಕರ ಚರ್ಚೆ ಒಂದು ಉದಾಹರಣೆ.

ದೇಹವು ಜೀವನಿಂದ ಬೇರೆಯೇ ಆಗಿದ್ದಲ್ಲಿ, “ನಾನು ಬೆಳ್ಳಗಿದ್ದೇನೆ” “ನಾನು ದಪ್ಪಗಿದ್ದೇನೆ”ಎಂದೇಕೆ ಮನುಷ್ಯರು ವ್ಯವಹರಿಸುತ್ತಾರೆ ? ಬೆಳ್ಳಗಿರುವದು, ದಪ್ಪಗಿರುವದು ದೇಹ, ಜೀವನಲ್ಲ. ಮನುಷ್ಯರ “ನನ್ನ ದೇಹ” ಎಂಬ ವ್ಯವಹಾರವನ್ನೇ ಪ್ರಮಾಣವನ್ನಾಗಿಟ್ಟುಕೊಂಡು ದೇಹ ಬೇರೆ ಆತ್ಮ ಬೇರೆ ಎಂದು ನಿರ್ಣಯಿಸುವದಾದರೆ ಅದೇ ಮನುಷ್ಯರ “ನಾನು ಕಪ್ಪಗಿದ್ದೇನೆ” “ನಾನು ತೆಳ್ಳಗಿದ್ದೇನೆ” ಎಂಬ ವ್ಯವಹಾರವನ್ನು ಆಧರಿಸಿ

ದೇಹವೇ ಆತ್ಮ ಎಂದೇಕೆ ನಿರ್ಣಯಿಸಬಾರದು ? ಒಂದು ವ್ಯವಹಾರ ಪ್ರಮಾಣ, ಮತ್ತೊಂದು ತಪ್ಪು ಎಂದು ಒಪ್ಪಲು ಕಾರಣವಿಲ್ಲ.

ಈ ಆಕ್ಷೇಪಕ್ಕೆ ಅನುವ್ಯಾಖ್ಯಾನ ನ್ಯಾಯಸುಧಾಗ್ರಂಥಗಳು ನೀಡಿರುವ ಉತ್ತರ ಹೀಗಿದೆ —

ಎರಡು ವಸ್ತುಗಳಿಗೆ ಬೇರ್ಪಡಿಸಲಾಗದಷ್ಟು ನಿಕಟವಾದ ಸಂಬಂಧವಿದ್ದಲ್ಲಿ ಒಂದರ ಗುಣವನ್ನು ಮತ್ತೊಂದರಲ್ಲಿ ಕೂಡಿಸಿ ಹೇಳುವ ಪರಿಪಾಠ ಕಂಡು ಬರುತ್ತದೆ. ಅಂಥ ಸಾಕಷ್ಟು ಪ್ರಯೋಗಗಳನ್ನು ನಮ್ಮ ನಿತ್ಯಜೀವನದಲ್ಲಿ ನಾವು ಮಾಡುತ್ತಿರುತ್ತೇವೆ. ಉದಾಹರಣೆಗೆ “ಭಾರತ ಸ್ವತಂತ್ರ ದೇಶ” ಎಂಬ ಪ್ರಯೋಗ.

ತನ್ನ ಇಚ್ಛೆಯಂತೆ ತಾನು ಬದುಕುವವನು ಸ್ವತಂತ್ರ. ಇಚ್ಛೆ ಎನ್ನುವದು ಜೀವವಿರುವ ಪದಾರ್ಥದ ಲಕ್ಷಣ. ಜಡಪದಾರ್ಥಗಳಿಗೆ ಇಚ್ಛೆ ಇರುವದಿಲ್ಲ. ಭಾರತ ಎನ್ನುವದು ಒಂದು ಭೂಭಾಗದ ಹೆಸರು. ಆ ಜಡವಾದ ಭೂಭಾಗ ಹಿಂದೆ ಹೇಗಿತ್ತೋ ಹಾಗೇ

ಈಗಲೂ ಇದೆ. ಸ್ವಾತಂತ್ರ್ಯ ಪಾರತಂತ್ರ್ಯಗಳು ಆ ಭೂಭಾಗಕ್ಕೆ ಸಂಬಂಧಪಟ್ಟಿದ್ದಲ್ಲ. ಆ ಭೂಭಾಗದಲ್ಲಿ ವಾಸಿಸುವ ಜನರಿಗೆ ಸಂಬಂಧಪಟ್ಟಿದ್ದು.

ಹೀಗಾಗಿ ''ಭಾರತ ಸ್ವತಂತ್ರ'' ಎಂಬ ವಾಕ್ಯಕ್ಕೆ ಭಾರತೀಯರು ಸ್ವತಂತ್ರರು ಎಂದರ್ಥ. ಅಂದರೆ ಈ ಭಾರತದಲ್ಲಿ ವಾಸಿಸುವ ಜನ ತಮ್ಮ ಇಚ್ಛೆಗೆ ತಕ್ಕಂತೆ ಸರಕಾರವನ್ನು ರಚಿಸಬಲ್ಲರು, ನ್ಯಾಯಾಂಗವನ್ನು ನಡೆಸಬಲ್ಲರು, ಸಂವಿಧಾನಗಳನ್ನು ನಿರ್ಮಾಣ ಮಾಡಿಕೊಳ್ಳಬಲ್ಲರು, ಇನ್ನೊಬ್ಬರ ಹಂಗಿನಂತೆ ನಿರ್ಧಾರ ತೆಗೆದುಕೊಳ್ಳುವ ದುರವಸ್ಥೆ ಅವರಿಗಿಲ್ಲ ಎಂದರ್ಥ.

ಹೊರತು ಜಡವಾದ ಭಾರತ ಭೂಭಾಗ ಸರಕಾರ ನಿರ್ಮಾಣ ಮಾಡುವದಿಲ್ಲ, ಸಂವಿಧಾನವನ್ನು ರಚಿಸುವದಿಲ್ಲ. ಹೀಗಿದ್ದರೂ ನಾವು ''ಭಾರತ ಸ್ವತಂತ್ರದೇಶ'' ''ಭಾರತವು ತನ್ನದೇ ಆದ ನಿಯಮಗಳಡಿಯಲ್ಲಿ ಮುನ್ನಡೆಯುತ್ತಿದೆ'' ಎಂಬೆಲ್ಲ ವಾಕ್ಯಗಳನ್ನು ಪ್ರಯೋಗಿಸುತ್ತೇವೆ.

ಅದಕ್ಕೆ ಕಾರಣ, ಭಾರತ ಭಾರತೀಯ ಇವೆರಡೂ ಎಂದೆಂದಿಗೂ ಬೇರ್ಪಡಿಸಲಾಗದಂತಹ ನಿಕಟವಾದ ಭಾಂಧವ್ಯವನ್ನು ಹೊಂದಿರುವ ಪದಾರ್ಥಗಳು. ಭಾರತದಲ್ಲಿ ಹುಟ್ಟಿ ಬೆಳೆದು ಇಲ್ಲಿನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವ ಮಾತ್ರ ಭಾರತೀಯ. ಭಾರತ ಇಲ್ಲಿ ಹುಟ್ಟಿದ ಜನರಿಗೆ ಮಾತ್ರ ಸೇರಿದ್ದು. ಆದ್ದರಿಂದ ಭಾರತೀಯರ ಸ್ವಾತಂತ್ರ್ಯವನ್ನು ಭಾರತದ ಸ್ವಾತಂತ್ರ್ಯ ಎನ್ನುತ್ತೇವೆ. ಭಾರತೀಯ ಯೋಧರ ಗೆಲುವನ್ನು ಭಾರತದ ಗೆಲುವು ಎನ್ನುತ್ತೇವೆ.

ಮತ್ತೂ, ಭಾರತೀಯರಿಗೆ ಭಾರತ ಕೇವಲ ಜಡವಾದ ಭೂಭಾಗವಲ್ಲ. ಒಂದು ಕಾಡು ಮೇಡಾಗಷ್ಟೇ ನಮ್ಮ ಈ ಜನ್ಮಭೂಮಿಯನ್ನು ಕಾಣಲು ನಮ್ಮ ಅಂತರಾತ್ಮ ಒಪ್ಪುವದಿಲ್ಲ. ಅದಕ್ಕಾಗಿ ನಮ್ಮಲ್ಲಿರುವ ಜೈವಿಕತೆಯನ್ನು, ಸ್ವಾತಂತ್ರ್ಯವನ್ನು, ಗೆಲುವನ್ನು, ಒಟ್ಟಾರೆ ನಮ್ಮ ಎಲ್ಲ ಗುಣಗಳನ್ನು ನಾವು ಈ ಭೂಮಿಗೆ ಅರ್ಪಿಸಿದ್ದೇವೆ.

ಅದಕ್ಕಾಗಿ ಜಡವಾದ ಭೂಮಿಯನ್ನೂ ಜೀವ ತುಂಬಿದ ಭಾರತಮಾತೆಯನ್ನಾಗಿ ಗೌರವಿಸುತ್ತೇವೆ.

ಈ ಭೂಮಿ ಜಡವಾದದ್ದು ನಿಜ. ಆದರೆ ಅದರ ಬಗ್ಗೆ ನಮಗಿರುವ ಭಾವನಾತ್ಮಕ ಸಂಬಂಧದಿಂದ, ಗೌರವದಿಂದ ಜೀವವಿರುವ ಪದಾರ್ಥವೆಂದು ವ್ಯವಹರಿಸುತ್ತೇವೆ.

ಆದ್ದರಿಂದ “ಭಾರತ ಸ್ವತಂತ್ರದೇಶ” ಎಂಬ ವಾಕ್ಯವನ್ನು ಆಧಾರವನ್ನಾಗಿಟ್ಟುಕೊಂಡು ಹೇಗೆ ಭಾರತ ಎಂಬ ಜಡವಸ್ತುವನ್ನು ಜೀವವಿರುವ ವಸ್ತು ಎಂದು ಒಪ್ಪಲಾಗುವದಿಲ್ಲವೋ ಹಾಗೆಯೇ ನಾನು ಬೆಳ್ಳಗಿದ್ದೇನೆ ಎಂಬ ವಾಕ್ಯವನ್ನು ಪ್ರಮಾಣವಾಗಿಸಿ ದೇಹವೇ ಜೀವ ಎಂದು ಒಪ್ಪಲಾಗುವದಿಲ್ಲ.

ಇಷ್ಟೇ ಅಲ್ಲ, ನಮ್ಮ ನಿತ್ಯಜೀವನದಲ್ಲಿಯೂ ಈ ತರಹದ ನೂರಾರು ಪ್ರಯೋಗಗಳನ್ನು ಮಾಡುತ್ತಿರುತ್ತೇವೆ. “ಬೆಂಗಳೂರು ಮಲಗಿತು” ಎನ್ನುತ್ತೇವೆ. ಬೆಂಗಳೂರು ಎಂಬ ಭೂಭಾಗ ಏಳುವದೂ ಇಲ್ಲ ಮಲಗುವದೂ ಇಲ್ಲ. ಆ ವಾಕ್ಯಕ್ಕೆ ಬೆಂಗಳೂರಿನ ಜನರ ವ್ಯಾಪಾರ ವಹಿವಾಟು ಓಡಾಟ ಮುಗಿದವು ಎಂದರ್ಥ.

ಹಾಗೆಯೇ ನಾನು 100 ಕಿಮೀ ವೇಗದಲ್ಲಿ ಬರುತ್ತಿದ್ದೆ ಎನ್ನುತ್ತೇವೆ. 100ಕಿಮೀ ವೇಗದಲ್ಲಿ ಬರುತ್ತಿರುವದು ನಾನಲ್ಲ, ನಾನು ಓಡಿಸುತ್ತಿರುವ ವಾಹನ. ಆದರೂ ನಾನೇ ಬಂದೆ ಎನ್ನುತ್ತೇವೆ. ಕಾರಣ ನಾನಿಲ್ಲದೇ ವಾಹನ ಓಡುವದಿಲ್ಲ. ವಾಹನವಿಲ್ಲದೇ ನಾನು 100 ಕಿಮೀ ವೇಗದಲ್ಲಿ ಬರಲು ಸಾಧ್ಯವಿಲ್ಲ.

ಆದ್ದರಿಂದ ಅತ್ಯಂತ ನಿಕಟವಾದ ಎರಡು ಪದಾರ್ಥಗಳಲ್ಲಿ ಒಂದರ ಗುಣವನ್ನು ಮತ್ತೊಂದರ ಜತೆಯಲ್ಲಿ ಕೂಡಿಸಿ ಹೇಳುವದು ಎಲ್ಲರ ಅನುಭವಕ್ಕೆ ಸಿದ್ಧವಾದ ವಿಷಯ. ಹೀಗಾಗಿ ನಾನು ಬೆಳ್ಳಗಿದ್ದೇನೆ ಎಂದರೆ ನನ್ನ ದೇಹ ಬೆಳ್ಳಗಿದೆ ಎಂದೇ ಅರ್ಥ. ನಾನು ದಪ್ಪಗಿದ್ದೇನೆ ಎಂದರೆ ನನ್ನ ದೇಹ ದಪ್ಪಗಿದೆ ಎಂದೇ ಅರ್ಥ. ಹೀಗಾಗಿ ಈ ಪ್ರಯೋಗದಿಂದ ನಾನೇ ನನ್ನ ದೇಹ ಎಂಬ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಆದ್ದರಿಂದ ದೇಹದಿಂದ ಬೇರೆಯಾದ ಜೀವ ಇದ್ದಾನೆ ಎಂಬುದನ್ನು ಒಪ್ಪಲೇಬೇಕು.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India

nagendracharya@yahoo.co.in

WhatsApp: 9901 551 491